# 12

# ಯೇಸು: ಬರಲಿಕ್ಕಿರುವಾತನು

ತಾನು ಶಿಲುಬೆಗೆ ಹಾಕಲ್ಪಡುವದಕ್ಕಿಂತ ಸ್ವಲ್ಪ ಸಮಯದ ಮೊದಲು, ಯೇಸುವು ತನ್ನ ಶಿಷ್ಯರಿಗೆ, "... ನಿಮಗೆ ಸ್ಥಳವನ್ನು ಸಿದ್ಧಮಾಡುವದಕ್ಕೆ ಹೋಗುತ್ತೇನಲ್ಲಾ. ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರದುಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು" (ಯೋಹಾನ 14:2, 3). ಆತನ ದಿವಾರೋಹಣವನ್ನು ಹಿಂಬಾಲಿಸಿ ಕೂಡಲೇ, ಇಬ್ಬರು ದೇವದೂತರು (ಇಬ್ಬರು ಬಿಳಿ ವಸ್ತ್ರಧಾರಿಗಳು) ಆತನ ಶಿಷ್ಯರಿಗೆ ಕಾಣಿಸಿಕೊಂಡು, ಹೀಗೆ ಹೇಳಿದನು: "ಗಲಿಲಾಯದವರೇ, ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು" (ಅಪೊಸ್ತಲರ ಕೃತ್ಯ 1:11).

## ಎರಡನೆಯ ಬರೋಣವನ್ನು ಕುರಿತ ತಪ್ಪುಗಳು

ಎರಡನೆಯ ಬರೋಣವು ನಿಶ್ಚಿತವಾದ ಘಟನೆಯಾಗಿದ್ದರೂ, ಈ ಬಹಳವಾಗಿ ನಿರೀಕ್ಷಿಸಲ್ಪಟ್ಟ ಘಟನೆಯ ಬಗ್ಗೆ ಹಲವಾರು ತಪ್ಪುಗಳು ಬೋಧಿಸಲ್ಪಟ್ಟಿವೆ. ಪ್ರತಿಯೊಬ್ಬ ಕ್ರೈಸ್ತನು ಬೈಬಲಿನವುಗಳಲ್ಲಿದ ಊಹಾಪೋಹಗಳಿಂದ ಗಲಿಬಿಲಿಗೊಳ್ಳದಂತೆ ಯೇಸುವಿನ ಹಿಂದಿರುಗುವಿಕೆಯ ಬಗ್ಗೆ ಬೈಬಲಿನ ಬೋಧನೆಗಳನ್ನು ತಿಳಿದುಕೊಳ್ಳತಕ್ಕದ್ದು.

### "ಆತನು ಆಗಲೇ ಬಂದಿದ್ದಾನೆ"

ಕರ್ತನ ದಿನವು ಆಗಲೇ ಬಂದಿದೆ ಎಂಬುದನ್ನು ಪೌಲನು ಬಲವಾಗಿ ವಿರೋಧಿಸಿದನು:

> ಸಹೋದರರೇ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯ ವಿಷಯ ವಾಗಿಯೂ ನಾವು ಆತನ ಬಳಿಯಲ್ಲಿ ಕೂಡಿಕೊಳ್ಳುವದರ ವಿಷಯ ವಾಗಿಯೂ ನಿಮ್ಮನ್ನು ಬೇಡಿಕೊಳ್ಳುವದೇನಂದರೆ - ಕರ್ತನ ದಿನವು ಈಗಲೇ ಹತ್ತಿರವಾಯಿತೆಂಬದಾಗಿ ದೇವರಾತ್ಮ ಪ್ರೇರಿತವಾದ ನುಡಿ ಇದೆ ಎಂದಾಗಲಿ ಪೌಲನು ಹಾಗೆ ಹೇಳಿದನೆಂದಾಗಲಿ ಪೌಲನು ಹಾಗೆ ಬರೆದನೆಂದಾಗಲಿ ಯಾರಾದರೂ ಹೇಳಿ ದರೂ ನೀವು ಬೇಗನೆ ಬುದ್ಧಿಗೆಟ್ಟು ಚಂಚಲರಾಗಿ ಕಳವಳಪಡಬೇಡಿರಿ (2 ಥೆಸಲೊನೀಕ 2:1, 2).

ಕರ್ತನ ದಿನವು "ಹತ್ತಿರವಾಗಿದೆ" (KJV) ಇಲ್ಲವೇ "ಬಹಳ ಸಮೀಪದಲ್ಲಿದೆ" (ASV) ಎಂದು ಜನರು ಹೇಳುತ್ತಿರಲಿಲ್ಲ. ಆದರೆ ಕ್ರಿ.ಶ. 51ರಲ್ಲಿ 2 ಥೆಸಲೊನೀಕದವರಿಗೆ ಬರೆದ ಪತ್ರಿಕೆಯು ಬರೆಯಲ್ಪಡುವ ಸಮಯದಲ್ಲಿ ಆಗಲೇ ಬಂದಿದೆ ಎಂದು ಹೇಳುತ್ತಿದ್ದರು.

ಪ್ರೇರೇಪಿತ ಪದವು ತಪ್ಪನ್ನು ಅಕ್ಷರಶಃವಾಗಿ ವಿವರಿಸುವದರ ಅರ್ಥವು ಕರ್ತನ

ದಿನವು "has stood in" ಎಂದಾಗುವುದು, ಆದರೆ ಅದು ಹೆಚ್ಚು ಸರಳವಾಗಿ "has come" (NASB; RSV) ಎಂದು ಭಾಷಾಂತರಿಸಲ್ಪಟ್ಟಿದೆ. ಅದೇ ಪದವು 1 ಕೊರಿಂಥ 3:22 ಮತ್ತು ರೋಮಾಪುರ 8:38ರಲ್ಲಿ ಕಂಡುಬರುತ್ತದೆ, ಅಲ್ಲಿ ಅದು "present" ಎಂದು ಭಾಷಾಂತರಿಸಲ್ಪಟ್ಟಿದೆ. ಹೀಗೆ 2 ಥೆಸಲೊನೀಕ 2:2ರಲ್ಲಿ ಅದರ ಸರಿಯಾದ ಭಾಷಾಂತರವು ಕರ್ತನ ದಿನವು ಈಗ ಬಂದಿದೆ, ಈಗ ಅದು ವಾಸ್ತವಿಕತೆಯಾಗಿದೆ ಎಂದು ಕೆಲವರು ಹೇಳಿದ್ದಾರೆ ಎಂದಾಗುತ್ತದೆ.

ಕರ್ತನ ದಿನದ ಇಂದಿನ ವಾಸ್ತವಿಕತೆಯನ್ನು ಪ್ರತಿಪಾದಿಸುವ ಮೊದಲನೆಯ ಶತಮಾನದವರು, ಆ ಮಹಾದಿನದಂದು ಕರ್ತನು ಆಕಾಶದಲ್ಲಿ ದೃಶ್ಯವಾಗಿ ಕಾಣಿಸುವ ಸಂಗತಿಯನ್ನು ತಿಳಿಯದೇ ಹೋಗಿದ್ದಾರೆ (ಅಪೊಸ್ತಲರ ಕೃತ್ಯ 1:9-11). ಕರ್ತನ ದಿನವು ಬರುವದಕ್ಕಿಂತ ಮೊದಲು ಮತ ಭ್ರಷ್ಟತೆಯು ಉಂಟಾಗುವದನ್ನು ಅರಿತು ಕೊಂಡವರಾಗಿರುವದಿಲ್ಲ (2 ಥೆಸಲೊನೀಕ 2:3).

### "ಆತನು ಕೂಡಲೇ ಬರುತ್ತಿದ್ದಾನೆ"

ಯೇಸು ಕ್ರಿಸ್ತನ ಎರಡನೆಯ ಬರೋಣದ ಬಗ್ಗೆ ಥೆಸಲೊನೀಕದವರಲ್ಲಿದ್ದ ಎರಡನೆಯ ತಪ್ಪು ತಿಳುವಳಿಕೆಯು ಅದು ಹತ್ತಿರವಾಗಿದೆ, ಈಗಲೇ ಬರುತ್ತಿದೆ, ಭಯಪಡಿಸುತ್ತಿದೆ ಎಂಬುದು "ಇಂದಿನ ವಾಸ್ತವಿಕತೆಯ" ತಪ್ಪನ್ನು ಖಂಡಿಸುವಲ್ಲಿ ಎರಡನೆಯ ಬರೋಣಕ್ಕಿಂತ ಮೊದಲು ಏನು ಸಂಭವಿಸತಕ್ಕದ್ದು ಎಂಬುದನ್ನು ಪೌಲನು ಹೇಳಿದನು. ಕ್ರಿ.ಶ. 51ರಲ್ಲಿ ಕರ್ತನ ದಿನವು ಬಾರದಿರುವದಕ್ಕೆ ಅನೇಕ ಸಂಗತಿಗಳು ಒಳಗೊಂಡಿರುತ್ತವೆ (ನೋಡಿರಿ 2 ಥೆಸಲೊನೀಕ 2:1-12). ಕ್ರಿ.ಶ. 51ರಿಂದ ನಿಶ್ಚಯ ವಾಗಿಯೂ ಮಹಾ ಮತಭ್ರಷ್ಟತೆಯು ತುಂಬಿಕೊಂಡಿದೆ ಮತ್ತು ಕರ್ತನ ದಿನದ ವರೆಗೆ ಆ ಮತ ಭ್ರಷ್ಟತೆಯು ಮುಂದುವರಿಯುತ್ತದೆ (2 ಥೆಸಲೊನೀಕ 2:8). ಆದುದರಿಂದ ಕರ್ತನ ದಿನವು ಯಾವುದೇ ಕೊಡಲ್ಪಟ್ಟ ಸಂತತಿಯಲ್ಲಿ ಬರುವದೆಂದು ಯಾರೂ ಹೇಳ ಲಾರರು. ಆ ದಿನವು ಕಳ್ಳನಂತೆ ಬರುವುದು (1 ಥೆಸಲೊನೀಕ 5:1, 2); ಅಂದರೆ ಅದು ಅನಿರೀಕ್ಷಿತವಾದದ್ದೂ ಫಕ್ಕನೇ ಬರುವಂಥದ್ದೂ ಆಗಿದೆ. ಈ ಕಾರಣದಿಂದ ಕರ್ತನ ಹಿಂದಿರುಗುವಿಕೆಯ ಸಾಮೀಪ್ಯದ ಬಗ್ಗೆ ಇರುವ ಹೇಳಿಕೆಗೆ ಒಪ್ಪಿಗೆ ಕೊಡಲಿಕ್ಕಾಗುವದಿಲ್ಲ. ಒಂದು ತಲಾಂತರದಲ್ಲಿ ಕರ್ತನ ಬರುವಿಕೆಯು ನಿಶ್ಚಿತವಾಗಿದೆಯೆಂದು ಬೋಧಿಸುವಾಗ ಆ ತಲತಲಾಂತರದಲ್ಲಿ ಆತನು ಬರುವದಿಲ್ಲ ಎಂದು ತಿಳಿಯಲಿಕ್ಕೆ ದೃಢವಾದ ಕಾರಣವಾಗಿದೆ. "ಇದಲ್ಲದೆ ಆ ದಿನದ ವಿಷಯವೂ ಆ ಗಳಿಗೆಯ ವಿಷಯವೂ ನನ್ನ ತಂದೆಯೊಬ್ಬನಿಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು, ಮಗನಿಗೂ ತಿಳಿಯದು" (ಮತ್ತಾಯ 24:36); "ನೀವು ನೆನಸದ ಗಳಿಗೆಯಲ್ಲಿ ಮನುಷ್ಯ ಕುಮಾರನು ಬರುತ್ತಾನೆ" (ಮತ್ತಾಯ 24:44) ಎಂದು ಯೇಸು ಹೇಳಿದನು.

### "ಆತನು ಹಿಂದಿರುಗಿ ಬರುವಾಗ ಜೀವಿಸಿರುವೆನೆಂದು ಪೌಲನು ನಿರೀಕ್ಷಿಸಿದನು"

ಯೇಸು ಕ್ರಿಸ್ತನ ಹಿಂದಿರುಗುವಿಕೆಯ ಬಗ್ಗೆ ಮೂರನೆಯ ತಪ್ಪು ಕರ್ತನು ಬಂದಾಗ ಜೀವಿಸಿರುವೆನೆಂದು ಪೌಲನು ನಿರೀಕ್ಷಿಸಿದನು ಎಂಬ ಕೆಲವು ಜನರ ವಿಚಾರವು 1 ಥೆಸಲೊ ನೀಕ 4:15ರಲ್ಲಿ ಪೌಲನು ಪ್ರಥಮ ಪುರುಷನನ್ನು ಉಪಯೋಗಿಸಿದ್ದು ಅವರು ಈ ರೀತಿ ವಿಚಾರಿಸಲಿಕ್ಕೆ ಕಾರಣವಾಗಿದೆ. ಅದೇ ತರ್ಕದಿಂದ, ಕರ್ತನು ಬರುವಾಗ ಪೌಲನು

ಸತ್ತು ಹೋಗಿರುವನೆಂದು ನಿರೀಕ್ಷಿಸ ಬಹುದು. ಯಾಕಂದರೆ 1 ಕೊರಿಂಥ 6:14 ಮತ್ತು 2 ಕೊರಿಂಥ 4:14ರಲ್ಲಿ ಸತ್ತವರೊಳಗಿಂದ ಎಬ್ಬಿಸಲ್ಪಟ್ಟವರನ್ನು ವಿವರಿಸುವಾಗ ಪ್ರಥಮ ಪುರುಷನನ್ನು ಉಪಯೋಗಿಸಿದ್ದಾನೆ.

ನಿಜವಾಗಿಯೂ, ಪೌಲನು ತನ್ನ ವೈಯಕ್ತಿಕ ಸ್ಥಿತಿಯನ್ನು ಪ್ರತ್ಯೇಕವಾಗಿ ಚರ್ಚಿಸಲಿಲ್ಲ. ಹಾಗಿದ್ದರೂ ಕ್ರಮೇಣವಾಗಿ ಬೆಳೆಯುವ ಧರ್ಮಭ್ರಷ್ಟತೆಯ ಬಗ್ಗೆ ಅವನು ಮಾತಾಡಿದನು. ಧರ್ಮ ಭ್ರಷ್ಟತೆಯು ತನ್ನ ಕೊನೆಯ ಬಲವನ್ನು ತಲುಪುವವರೆಗೆ ತೀರ್ಮಾನಿಸಿದ ಸಮಯದ ಅವಧಿಯ ವರೆಗೆ ನಿಯಂತ್ರಣದಲ್ಲಿ ಉಳಿದು ಕೊಳ್ಳು ವುದು. ಇದರ ಬಗೆಗಿನ ಪೌಲನ ತಿಳುವಳಿಕೆಯು ಕರ್ತನು ಬಂದಾಗ ತಾನು ಜೀವಿ ಸಿರುವದನ್ನು ನಿರೀಕ್ಷಿಸಲಿಲ್ಲ ಎಂದರ್ಥ ಕೊಡುತ್ತದೆ.

**"ಕರ್ತನ ಬರುವಿಕೆಗೆ ಎರಡು ಹಂತಗಳಿರುತ್ತವೆ"**

ಎರಡನೆಯ ಬರೋಣಕ್ಕೆ ಸಂಬಂಧಿಸಿ ನಾಲ್ಕನೆಯ ತಪ್ಪು ಇಂದು ಕೆಲವರ ಪರವಾಗಿ ಏಳು ವರ್ಷಗಳ ಅಂತರದಲ್ಲಿ ಎರಡು ಭವಿಷ್ಯದ ದೃಶ್ಯವಾದ ಬರೋಣ ಗಳು ಸಂಭವಿಸುವವು ಎಂಬ ಹೇಳಿಕೆಯಾಗಿದೆ. ಯೇಸುವು ತನ್ನ *parousia*ದಲ್ಲಿ[1] ತನ್ನ ಭಕ್ತರಿಗಾಗಿ ಬರುವನು; ಸತ್ತವರನ್ನು ಎಬ್ಬಿಸುವನು ಮತ್ತು ಜೀವಿತರನ್ನು ಮಾರ್ಪಡಿಸುವನು, ಹಾಗೂ ಆಮೇಲೆ ಏಳು ವರ್ಷಗಳ ನಂತರ ತನ್ನ *epiphaneia* ದಲ್ಲಿ ತನ್ನ ಭಕ್ತರೊಂದಿಗೆ ಪುನಃ ಕಂಡು ಕೊಳ್ಳುವನು. ಈ ಸುಳ್ಳು ಬೋಧನೆಗೆ ಅನುಗುಣ ವಾಗಿ ಯೇಸುವಿನ ಬರೋಣಗಳ ಮಧ್ಯದಲ್ಲಿಯ ಏಳು ವರ್ಷಗಳಲ್ಲಿ ವಿಶಾಲವಾದ ಸಂಕಟದಲ್ಲಿ ಭೂಲೋಕವು ಗಲಿಬಿಲಿಯಿಂದ ತುಂಬಿಕೊಂಡಿರುವಾಗ, ಮೋಡದ ಮಹಿಮೆಯ ರಾಪ್ಚರಿನಲ್ಲಿ[2] ಭಕ್ತರು ವಾಸಿಸುವರು. ಏಳು ವರ್ಷಗಳ ಅಂತ್ಯದಲ್ಲಿ ಕರ್ತನು ತನ್ನ *epiphaneia*ದಲ್ಲಿ ಹಿಂದಿರುಗಿ ಬರುವನೆಂದು ಹಾಗೂ ಮಿಲ್ಲೆನಿಯಮ್ ತರುವನೆಂದು ನಿರೀಕ್ಷಿಸಲಾಗಿದೆ; ಅದರ ಅಂತ್ಯದಲ್ಲಿ ದುಷ್ಟರಾದ ಸತ್ತವರನ್ನು ಆತನು ಎಬ್ಬಿಸುವನು.

ಈ ತತ್ವಕ್ಕೆ ಬೆಂಬಲವು ಮೂಲ ಮಾತುಗಳಲ್ಲಿ ಹುಡುಕಲ್ಪಟ್ಟಿದೆ, ಕರ್ತನ ಎರಡನೆಯ ಬರೋಣದ ಎರಡು ಹಂತಗಳನ್ನು ವಿವರಿಸಲಿಕ್ಕೆ ಪರಿಶುದ್ಧಾತ್ಮನು *parousia*, ಮತ್ತು *epiphaneia* ಎಂಬ ಎರಡು ಪದಗಳನ್ನು ಪ್ರತ್ಯೇಕವಾಗಿ ಪ್ರೇರೇಪಿಸಿದನೆಂದು ಹೇಳಲಾಗುತ್ತಿದೆ. ಹಾಗಿದ್ದರೂ, *parousia* ಪದವು ಮಾನವ ಜೀವಿಗಳ ಬರುವಿಕೆಗೆ (2 ಕೊರಿಂಥ 7:6), ಪಾಪದ ಮನುಷ್ಯನು ಬರುವದರೊಂದಿಗೆ (2 ಥೆಸಲೊನೀಕ 2:9) ಹಾಗೂ ಬೇತ್ಲೆಹೇಮಿಗೆ ಕರ್ತನ ಮೊದಲನೆಯ ಬರೋಣಕ್ಕೆ ಸಂಬಂಧಿಸಿ ಉಪಯೋಗಿ ಸಲ್ಪಟ್ಟಿದೆ. ಹಾಗೆಯೇ ಲೋಕದ ಅಂತ್ಯದಲ್ಲಿ ಕರ್ತನ ಎರಡನೆಯ ಬರೋಣಕ್ಕೆ (1 ಕೊರಿಂಥ 15:23) ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ. ಆದುದರಿಂದ *parousia* ಪದವು ಕರ್ತನ ಎರಡನೆಯ ಬರೋಣದ ಮೊದಲನೆಯ ಹಂತವೆಂದು ವಿವರಿಸಲಿಕ್ಕೆ ವಿಶೇಷ ವಾಗಿ ಪ್ರೇರೇಪಿಸಲ್ಪಟ್ಟಿತೆಂದು ಅಧಿಕೃತವಾಗಿ ಒಪ್ಪಿಕೊಳ್ಳುವದಕ್ಕಾಗುವದಿಲ್ಲ.

ಅದರಂತೆಯೇ, *epiphaneia* ಪದವು ಬೇತ್ಲೆಹೇಮಿಗೆ ಕರ್ತನ ಮೊದಲನೆಯ ಆಗಮನದ ಬಗ್ಗೆ ಹೇಳಲು (2 ತಿಮೊಥೆ 1:10) ಅದರಂತೆ ಲೋಕದ ಅಂತ್ಯದಲ್ಲಿ ಆತನ ಎರಡನೆಯ ಬರೋಣದ ಬಗ್ಗೆ ಹೇಳಲು ಉಪಯೋಗಿಸಲ್ಪಟ್ಟಿದೆ (1 ತಿಮೊಥೆ 6:14). ಆದುದರಿಂದ *epiphaneia* ಪದವು ಕರ್ತನ ಎರಡನೆಯ ಬರೋಣದ ಎರಡನೆಯ ಹಂತವೆಂದು ಹೇಳಲ್ಪಟ್ಟದ್ದನ್ನು ವಿವರಿಸಲು ಪ್ರೇರೇಪಿಸಲ್ಪಟ್ಟ ತಾಂತ್ರಿಕ ಪದವೆಂದು ಒಪ್ಪಿಕೊಳ್ಳುವುದು ಸರಿಯಾದದ್ದಾಗಿರುವದಿಲ್ಲ.

*Parousia*ದಲ್ಲಿ ಆತನು ತನ್ನ ಭಕ್ತರೊಂದಿಗೆ ನಿಜವಾಗಿಯೂ ಬರಲಿಕ್ಕಿದ್ದಾಗ, ತನ್ನ ಭಕ್ತರಿಗಾಗಿ ಯೇಸುವು ಬರುವನೆಂಬುದು ಸುಳ್ಳು ಬೋಧನೆಯಾಗಿದೆ (1 ಥೆಸಲೊನೀಕ 3:13; 4:14). ಕರ್ತನೊಂದಿಗೆ ಬರಲಿಕ್ಕಿರುವ ಭಕ್ತರು (ಗ್ರೀಕ: *hagioi* "ಪರಿಶುದ್ಧರು") ದೇವದೂತರಾಗಿರಬಹುದು (2 ಥೆಸಲೊನೀಕ 1:7; ಯೂದ 14), ಇಲ್ಲವೇ ಅವರು ತಮ್ಮ ದೇಹದ ಉಳಿಯುವಿಕೆಯೊಂದಿಗೆ ಪುನಃ ಬಂದಾಗಿ ಆಮೇಲೆ ಬದಲಾವಣೆ ಹೊಂದಲು ಪರದೈಸದಿಂದ ಹಿಂದಿರುಗುವ ಸತ್ತು ಹೋದ ಕ್ರೈಸ್ತರ ಆತ್ಮಗಳಾಗಿರಬಹುದು. ಅವರು ದೇವರ ಮಕ್ಕಳ ಸತ್ತುಹೋದ ಆತ್ಮಗಳಾಗಿರಲಿ ಇಲ್ಲವೇ ದೇವದೂತರಾಗಿರಲಿ ಅವರ ಬರೋಣವು *parousia*ದಿಂದ ಭಿನ್ನವಾದ, ವಿಶೇಷವಾದ *epiphaneia*ದಲ್ಲಿ ಆಗುವದೆಂದು ಯಾವದೇ ಬೋಧನೆಯಿರುವದಿಲ್ಲ.

1 ಥೆಸಲೊನೀಕ 4:16ರಲ್ಲಿ "ಕ್ರಿಸ್ತನಲ್ಲಿ ಸತ್ತವರು" ಎಂಬ ಹೇಳಿಕೆಯು ಸುಳ್ಳು ತತ್ವವಾಗಿ ಹೇಳಲ್ಪಟ್ಟಂತೆ ಕ್ರಿಸ್ತನ ಹೊರಗೆ ಸತ್ತು ಹೋಗುವರೊಂದಿಗೆ ವಿರೋಧ ವಾಗಿಡಲ್ಪಟ್ಟಿರುವದಿಲ್ಲ. ಆದರೆ ಅದು ಕ್ರಿಸ್ತನಲ್ಲಿ ಸತ್ತು ಹೋದವರನ್ನು ಕ್ರಿಸ್ತನಲ್ಲಿ ಜೀವಿಸುವವರೊಂದಿಗೆ ವಿರೋಧವಾಗಿ ಹೇಳುತ್ತದೆ (1 ಥೆಸಲೊನೀಕ 4:15). ಈ ಹಿನ್ನೆಲೆಯಲ್ಲಿ, ಪೌಲನು ಕ್ರೈಸ್ತರನ್ನು ಮಾತ್ರವೇ ಚರ್ಚಿಸುತ್ತಿದ್ದಾನೆ. ಕರ್ತನನ್ನು ಸೇರಿ ಕೊಳ್ಳಲು ಭೂಲೋಕವನ್ನು ಸತ್ತು ಹೋದ ಕ್ರೈಸ್ತರು ಬಿಡುವ ಮೊದಲು ಜೀವಿಸುವ ಕ್ರೈಸ್ತರು ಬಿಟ್ಟುಹೋಗುವದಿಲ್ಲ ಎಂದು ಅವನು ಹೇಳುತ್ತಿದ್ದಾನೆ. ಜೀವಿಸುವವರಾಗಲೀ ಇಲ್ಲವೇ ಸತ್ತವರರಾಗಲಿ ಕ್ರಿಸ್ತನ ಹೊರಗಿರುವವರನ್ನು 1 ಥೆಸಲೊನೀಕ 4 ಕಡೆಗಣಿಸುತ್ತದೆ.

## ಎರಡನೆಯ ಬರೋಣದ ಗುಣಲಕ್ಷಣಗಳು

**ಪೂರ್ವಾಪೇಕ್ಷಿತವಾದದ್ದು**

ಪೌಲನು ಒಪ್ಪಿಕೊಂಡ, ಎರಡನೆಯ ಬರೋಣದ ಪೂರ್ವಾಪೇಕ್ಷಿತವಾದದ್ದು ಈಗಾಗಲೇ ಅಸ್ತಿತ್ವದಲ್ಲಿರುವ ಮತ ಭ್ರಷ್ಟತೆಯ ಬೆಳವಣಿಗೆಯಾಗಿತ್ತು. ಪೌಲನು ಬರೆಯುತ್ತಿದ್ದ ಸಮಯದಲ್ಲಿ ಈ ಚಳವಳವು ನಿಯಂತ್ರಣದಲ್ಲಿದ್ದು, ಹೆಚ್ಚೆಚ್ಚಾಗಿ ಬೆಳೆ ಯುತ್ತ ಹೋಗುವುದು ಆದರೆ ಕರ್ತನ ಎರಡನೆಯ ಬರೋಣದ ಸಮಯದಲ್ಲಿ ನಾಶ ಪಡಿಸಲ್ಪಡುವುದು (2 ಥೆಸಲೊನೀಕ 2:1-12).

ಮತಭ್ರಷ್ಟತೆಯ ರಹಸ್ಯವು, ಅಧರ್ಮಸ್ವರೂಪನು ಪೌಲನ ದಿನದಲ್ಲಿ ಆಗಲೇ ಕಾರ್ಯಚರಣೆಯಲ್ಲಿ ಇದ್ದನು. ನಿಶ್ಚಯವಾಗಿಯೂ ಅವನು 1 ಯೋಹಾನ 2:18ರಲ್ಲಿ ಹೇಳಿದ ಕ್ರಿಸ್ತ ವಿರೋಧಿಗಳಲ್ಲಿ ಒಬ್ಬಾನಾಗಿದ್ದನು, ಅವರಲ್ಲಿ ಕೆಲವರು ಆಗಲೇ ತಲುಪಿದ್ದಾರೆ. 2 ಥೆಸಲೊನೀಕ 2ರಲ್ಲಿ ಹಟಮಾರಿ ಅಧರ್ಮಸ್ವರೂಪನಿಗೆ ಹಲ ವಾರು ಕ್ರಿಸ್ತನನ್ನು ವಿರೋಧಿಸಿದ ಗುಣಲಕ್ಷಣಗಳಿವೆ (ಕ್ರಿಸ್ತನ ವಿರೋಧಿ). ಯೇಸುವು ನೀತಿ ಸ್ವರೂಪನಾಗಿರುವಾಗ, ಅವನು ಪಾಪ ಸ್ವರೂಪನಾಗಿರುವನು. ಕ್ರಿಸ್ತನು ಜೀವದ ನಾಯಕನಾಗಿರುವಾಗ, ಅವನು ನಾಶನದ ಮಗನಾಗಿದ್ದಾನೆ (ಅಪೊಸ್ತಲರ ಕೃತ್ಯ 3:15). ಯೇಸುವು ತಂದೆಯ ಚಿತ್ತಕ್ಕೆ ಒಪ್ಪಿಸಿಕೊಟ್ಟಿರುವಾಗ, ಅವನು ದೇವರನ್ನು ವಿರೋಧಿಸಿದನು.

ಪಾಪದ ಮನುಷ್ಯನು ಮತ್ತು ನೀತಿಯ ಮನುಷ್ಯನು ಇಬ್ಬರೂ ರಹಸ್ಯವನ್ನು ಹೊಂದಿಕೊಂಡವರಂತೆ (2 ಥೆಸಲೊನೀಕ 2:6-8; 1 ತಿಮೊಥೆ 3:16), ಅದ್ಭುತಗಳನ್ನು

ಮಾಡುವವರಂತೆ (2 ಥೆಸಲೊನೀಕ 2:9; ಯೋಹಾನ 5:19, 20) ಮತ್ತು *parousia* ಇದ್ದವರಂದೆ (2 ಥೆಸಲೊನೀಕ 2:8, 9) ವಿವರಿಸಲ್ಪಡಬಹುದು. ಹಾಗಿದ್ದರೂ, ಪಾಪದ ಮನುಷ್ಯನು ಕರ್ತನ *parousia*ದ ಪ್ರಕಾಶವನ್ನು ಹೊಂದಿಕೊಳ್ಳಲಾರನು: ಅವನು ಸಂಹಾರಿಸಲ್ಪಡುವನು.

ಅಧರ್ಮ ಸ್ವರೂಪನಿಗೆ ಹಲವಾರು ಗುರುತುಗಳು ಸೂಚಿಸಲ್ಪಟ್ಟಿವೆ; ಅನೇಕರು ನೀರೊ ಎಂದು ಹೆಸರಿಟ್ಟಿದ್ದಾರೆ. ಕ್ರಿ.ಶ. 68ರಲ್ಲಿ ಅವನ ಮರಣದವರೆಗೆ, ಪೌಲನ ಮುಂತಿಳಿಸುವಿಕೆಯಲ್ಲಿ ಅವನು ಅಧರ್ಮಸ್ವರೂಪನು ಆಗಿದ್ದನೆಂದು ತಮ್ಮ ಭಾವನೆಯನ್ನು ಕೊಡುವದನ್ನು ಕೆಲವರು ನಿರಾಕರಿಸಿದರು. ಅವನು ಪುನರುಜ್ಜೀವನ ಗೊಂಡು ಕ್ರೈಸ್ತರನ್ನು ಹಿಂಸಿಸುವದನ್ನು ಮುಂದುವರಿಸುವನು ಎಂದು ಹೇಳುವ "Nero Redivivus" ದಂತ ಕಥೆಯು ಹುಟ್ಟಿ ಬಂದಿತು. ಅದಕ್ಕೆ ವ್ಯತಿರಿಕ್ತವಾಗಿ, ನೀರೋ ಮತ್ತು ಇನ್ನೊಬ್ಬ ಅಭ್ಯರ್ಥಿ ಕಾಲಿಗುಲಾ (ತನ್ನ ಮೂರ್ತಿಯನ್ನೂ ಯೆರೂಸಲೇಮ ದೇವಾಲಯದಲ್ಲಿ ಇಟ್ಟವನು), ಅನರ್ಹರಾದರು, ಯಾಕಂದರೆ ಕರ್ತನು ಬರುವಾಗ ಅವರು ಅಧಿಕಾರದಲ್ಲಿರುವದಿಲ್ಲ. ಪೌಲನಿಂದ ಪ್ರವಾದನೆಯಾಗಿ ಹೇಳಲ್ಪಟ್ಟ ಅಧರ್ಮ ಸ್ವರೂಪನು ಕರ್ತನ ಬರೋಣದಲ್ಲಿ ಸಂಹರಿಸಲ್ಪಡುವವರೆಗೆ ಇರುವನು. ಅದರಂತೆ ಹೆಸರು ಇಡಲ್ಪಟ್ಟ ಇತರರೂ ತೆಗೆದು ಹಾಕಲ್ಪಟ್ಟರು ಯಾಕಂದರೆ ಯೇಸುವು ಹಿಂದಿರುಗಿ ಬರುವಾಗ ಅವರು ಅಧಿಕಾರದಲ್ಲಿ ಇರುವದಿಲ್ಲ.

ಅಧರ್ಮವನ್ನು ತಡೆಹಿಡಿಯುವವನ ಗುರುತೂ ವಿವಿಧವಾಗಿ ಹೇಳಲ್ಪಟ್ಟಿದೆ. ಪೌಲನು ತಾನೇ ತಡೆಹಿಡಿಯುವವನೆಂದು ಕೆಲವರು ಯೋಚಿಸಿದರು. ಇತರರು ಎಲ್ಲಾ ಅಪೊಸ್ತಲರನ್ನು ಕೂಡಿಸಿ ಹೇಳಿದ್ದಾರೆ. ಕೆಲವರು 2 ಥೆಸಲೊನೀಕ 2:7ರಲ್ಲಿಯ ಮಾತನ್ನು ಜರ್ಮನ್ ಸಾಮ್ರಾಜ್ಯದಿಂದ ಇಲ್ಲವೇ ರೋಮನ್ ಸಾಮ್ರಾಜ್ಯದಿಂದ ಪೇಪಸಿಯ ಬೆಳವಣಿಗೆಯನ್ನು ತಡೆಹಿಡಿಯಲು ಮಾಡಿದ ಪ್ರಯತ್ನಗಳಿಗೆ ಉಲ್ಲೇಖ ದಂತೆ ವ್ಯಾಖ್ಯಾನಿಸಿದ್ದಾರೆ. ಕ್ರಿ.ಶ. 476ರಲ್ಲಿ ರೋಮನ್ ಸಾಮ್ರಾಜ್ಯದ ಅಂತ್ಯವಾದ ನಂತರ ರೋಮನ್ ಬಿಷಪರು ಅಧಿಕಾರಕ್ಕಾಗಿ ತಮ್ಮ ಹಸಿವೆಯಲ್ಲಿ ಮಗ್ನರಾದರು. ಎರಡನೆಯ ಶತಮಾನದಲ್ಲಿ ಟೆರ್ಟಲ್ಲಿಯನು ತಡೆಹಿಡಿಯುವವನನ್ನು ಈ ರೀತಿ ವ್ಯಾಖ್ಯಾ ನಿಸಿದ್ದಾನೆ: "ಯಾವ ಆತಂಕವಿದೆ ಆದರೆ ರೋಮನ್ ರಾಜ್ಯ ...?"[3] ಅವನು ಹೀಗೂ ಹೇಳಿದ್ದಾನೆ,

> ಚಕ್ರವರ್ತಿಗಳ ಪರವಾಗಿ ನಾವು ಪ್ರಾರ್ಥನೆ ಅರ್ಪಿಸುವದಕ್ಕಾಗಿ ಇನ್ನೊಂದು ಹಾಗೂ ಹೆಚ್ಚು ದೊಡ್ಡದಾದ ಅವಶ್ಯಕತೆಯಿದೆ ... ಇಡೀ ಲೋಕದ ಮೇಲೆ ಬಲವಾದ ಆಘಾತವು ಬರಲಿದೆಯೆಂದು ನಾವು ಬಲ್ಲೆವು - ಎಲ್ಲಾ ಸಂಗತಿಗಳ ಅಂತ್ಯವು ಭಯಾನಕವಾದ ಶಾಪಗಳನ್ನು ಹೆದರಿಸುತ್ತಿರುವುದು - ರೋಮನ್ ಸಾಮ್ರಾಜ್ಯದ ಅಸ್ತಿತ್ವವು ಸತತ ಮುಂದುವರಿಕೆಯಿಂದ ಕೆಟ್ಟು ಹೋಗಿ ರುವುದು.[4]

ಗುರುತು ಹಿಡಿಯಲ್ಪಡದ ತಡೆಹಿಡಿಯುವವನು ತೆಗೆದು ಹಾಕಲ್ಪಟ್ಟ ನಂತರ, ಅಧರ್ಮ ಸ್ವರೂಪನು ಬಲಹೊಂದುವನು. ಕ್ರಿಸ್ತನ ಬರೋಣದ ವರೆಗೆ ಅವನ ಬಲವು ಇರುವುದು, ಆಗ ಅವನು ಸಂಹರಿಸಲ್ಪಡುವನು (2 ಥೆಸಲೊನೀಕ 2:8).

**ಅನಿಂದ್ಯ ಕ್ರೈಸ್ತರು**

ಕರ್ತನ ದಿನದಂದು ಯೇಸುವಿನ ಕಾರ್ಯವು ಸಂಪೂರ್ಣವಾಗಿ ನಾಶನಕರವಾದದ್ದಾಗಿರುವದಿಲ್ಲ. ಆತನ ಬರೋಣದ ಆನಂದಕರವಾದ ವಿಷಯವು ಪರಿಶುದ್ಧರನ್ನು, ಎಲ್ಲಾ ಯುಗಗಳ ವಿಮೋಚಿತರನ್ನು ಆತನು ಸ್ವೀಕರಿಸುವುದು ಆಗಿದೆ. ಥೆಸಲೊನೀಕ ಕ್ರೈಸ್ತರು ವಿಮೋಚಿತರ ಮಧ್ಯದಲ್ಲಿ ಇರಬೇಕೆಂದು ಪೌಲನು ಬಯಸಿದನು. ಅವರು "ಸಂಪೂರ್ಣವಾಗಿ" ಶುದ್ಧೀಕರಿಸಲ್ಪಡಬೇಕೆಂದು ಪ್ರಾರ್ಥಿಸಿದನು ಮತ್ತು ಆಗ ತನ್ನ ಪ್ರಾರ್ಥನೆಯನ್ನು ಪುನಃ ಹೇಳಿದನು: "ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮ ಪ್ರಾಣ ಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ" (1 ಥೆಸಲೊನೀಕ 5:23). ತನ್ನ ಜೊತೆ ಕ್ರೈಸ್ತರು ಸರಿಯಾದದ್ದಕ್ಕೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಬೇಕೆಂದು ಅವನು ಬಯಸಿದನು; ಮತ್ತು ಅವರು ಆ ರೀತಿಯಲ್ಲಿ, ಅನಿಂದ್ಯರಾಗಿ ಸಾಯಬೇಕು ಇಲ್ಲವೇ ಕರ್ತನು ಬರುವಾಗ ಆ ರೀತಿಯಲ್ಲಿ ಜೀವಿಸುತ್ತಿರ ಬೇಕೆಂದು ಅವನು ಬಯಸಿದನು.

**ಮಾರ್ಪಾಟ ಹೊಂದಿದವರು ಕಿರೀಟಗಳಂತೆ**

ಇತರ ಕಾರಣಗಳೊಳಗೆ, ಪೌಲನು ಕರ್ತನ ಬರೋಣಕ್ಕಾಗಿ ಮುನ್ನೋಡಿದನು, ಯಾಕಂದರೆ ಆಗ ಅವನು ತನಗೆ ಬಹಳ ಪ್ರಿಯವಾಗಿದ್ದ ಪ್ರೀತಿಯುಳ್ಳ ಥೆಸಲೊನೀಕದವರನ್ನು ನೋಡಬಹುದಾಗಿತ್ತು. ಅವನನ್ನು ಸಂತೋಷದಿಂದ ತುಂಬಿಸಿದ ಮುನ್ನೊಡುವಿಕೆಯು, ಅವನು ವಿಗ್ರಹಗಳಿಂದ ನಿಜವಾದ ದೇವರ ಕಡೆಗೆ ತಿರುಗಿಸಿದ ಜನರೊಂದಿಗೆ ಪುನಃ ಐಕ್ಯವಾಗುವನೆಂಬ ತಿಳುವಳಿಕೆಯಾಗಿತ್ತು, ಓಲಿಂಪಿಕ್ ಪಂದ್ಯಾಟದಲ್ಲಿ ಜಯಶಾಲಿಯು ಹೂವುಗಳ ಮಾಲೆಯನ್ನು ಹೊಂದಿಕೊಂಡಂತೆ, ಕರ್ತನ ದಿನದಂದು ಥೆಸಲೊನೀಕದವರು ತನ್ನ ಹೊಗಳಿಕೊಳ್ಳುವ ಜಯಮಾಲೆಯಾಗಿರುವರು ಎಂದು ಪೌಲನು ಹೇಳಿದನು (1 ಥೆಸಲೊನೀಕ 2:19).

ಮಾರ್ಪಾಟ ಹೊಂದಿದವರು ಕಿರೀಟಗಳಂತೆ ಆಗುವುದರೊಂದಿಗೆ 1 ಥೆಸಲೊನೀಕ 2:19ರ ಮಹತ್ವವು ಆ ಮಾರ್ಪಾಟ ಹೊಂದಿದವರು ಯಾರಾಗಿದ್ದರು ಎಂಬುದನ್ನು ಪೌಲನು ತಿಳಿದಿದ್ದನು ಎಂಬ ಕಲ್ಪನೆಯ ಮೇಲೆ ಅವಲಂಭಿಸಿತ್ತೆಂದು ತೋರುತ್ತದೆ. ಸಮಾಧಿಯನ್ನು ದಾಟಿ ವೈಯಕ್ತಿಕ ಗುರುತಿಸುವಿಕೆಯು ಬೈಬಲಿನ ಒಂದು ಭಾವನೆಯಾಗಿದೆ. ಒಬ್ಬ ದೇಹವು ಉಳಿದು ಕೊಳ್ಳುವದಿಲ್ಲ, ಆದರೆ ಜ್ಞಾಪಿಸಿಕೊಳ್ಳುವ ಸಾಮಾರ್ಥ್ಯವು ಉಳಿಯುವುದು.

**ದೇವರ ಕೋಪ**

ವಿಮೋಚಿತರಿಗೆ ಆನಂದ ಮತ್ತು ಸಂತೋಷದೊಂದಿಗೆ ಕ್ರಿಸ್ತನ ಎರಡನೆಯ ಬರೋಣವನ್ನು ಬೇರ್ಪಡಿಸಲು ಅಸಾಧ್ಯವಾದದ್ದು, ದುಷ್ಟರ ಮತ್ತು ಅವಿಧೇಯರ ಮೇಲೆ ಇರುವ ದೇವರ ಕೋಪವಾಗಿದೆ (1 ಥೆಸಲೊನೀಕ 1:10; 4:6; 5:3; 2 ಥೆಸಲೊನೀಕ 1:8, 9; 2:8), ವ್ಯಭಿಚಾರದ ಬಗ್ಗೆ ಸಭಾಸದಸ್ಯರು ಎಚ್ಚರಿಸಲ್ಪಟ್ಟರು, ಅಂಥ ದುಷ್ಟತನ ನಡಿಸುವ ಎಲ್ಲರ ಮೇಲೆ ಕರ್ತನು ಪ್ರತೀಕಾರ ಸಾಧಿಸುವನು ಎಂದು ಬುದ್ಧಿವಾದ ಹೇಳಲ್ಪಟ್ಟರು, ಇದಲ್ಲದೇ ಕರ್ತನು ಲೆಕ್ಕತೆಗೆದು ಕೊಳ್ಳುವದಿಲ್ಲ ಎಂಬಂತೆ ಜೀವಿಸುವ ಜನರು ಫಕ್ಕನೇ ಬರುವ ನಾಶನಕ್ಕೆ ಎಚ್ಚತ್ತು ಕೊಳ್ಳುವರು. ಅದು ಮಹಿಳೆಯ ಪ್ರಸವವೇದನೆಯಷ್ಟು ಫಕ್ಕನೇ ಬರುವುದು, ಮತ್ತು ತಪ್ಪಿಸಿಕೊಳ್ಳುವಿಕೆ ಇರುವುದೇ ಇಲ್ಲ. ಸುವಾರ್ತೆಗೆ ವಿಧೇಯ

ರಾಗಲು ನಿರಾಕರಿಸುವವರು ನಿತ್ಯ ನಾಶನದೊಂದಿಗೆ ಸಂದರ್ಶಿಸಲ್ಪಡುವರು.

"ನಾಶನ" ಎಂಬ ಪದವು ಅಕ್ಷರಶಃವಾಗಿ ತೆಗೆದುಕೊಳ್ಳಲ್ಪಡಬಾರದು. ಆ ಪಾಪಿಗಳು ನಿಜವಾಗಿಯೂ ನಾಶಪಡಿಸಲ್ಪಟ್ಟರೆ, ಇಲ್ಲವಾಗಿ ಮಾಡಲ್ಪಟ್ಟರೆ, ಅವರ ಶಿಕ್ಷೆಯು ನಿತ್ಯ ವಾದದ್ದಾಗುವದಿಲ್ಲ; ಅದು ನಿಂತು ಹೋಗುವುದು. ಪರಿಣಾಮವಾಗಿ, "ನಾಶನ" ಎಂಬ ಪದವು, 2 ಥೆಸಲೊನೀಕ 1:7-10ರಲ್ಲಿ ವಿಪತ್ತಿಗೆ ಸಮನಾಗಿದೆ. ಬಲಿಪಶುಗಳು ನಿರಂತರ ವಾದ ದುಃಖದಲ್ಲಿ ಇರುವರು ಆದರೆ ಅವರು ನಾಶಪಡಿಸಲ್ಪಡುವದಿಲ್ಲ.

"ಮರಣವು" ಬೇರ್ಪಡಿಸುವಿಕೆಯಾಗಿದೆ ಎಂದು ವಿವರಿಸಲ್ಪಡಬೇಕು ಎಂಬ ಸಾಮಾನ್ಯ ಅಭಿಪ್ರಾಯಕ್ಕೆ ಅದರಲ್ಲಿ ಸತ್ಯವಿರುತ್ತದೆ. ದೇವರ ಕೋಪಕ್ಕೆ ಬಲಿಯಾಗುವವರು ಆತನ ಮುಖದಿಂದ ಬೇರ್ಪಡಿಸಲ್ಪಡುವರು ಮತ್ತು ನಿತ್ಯ ಬೆಂಕಿಯ ಶ್ರಮೆಹೊಂದುವರು, ಅದು ಮರಣ ("ಎರಡನೆಯ ಮರಣ"; ಪ್ರಕಟನೆ 20:14) ಎಂದು ಕರೆಯಲ್ಪಡಲು ಸಾಕಷ್ಟು ವೇದನೆಯಾಗಿರುವುದು, ಆದರೆ ಅದು ಅಕ್ಷರಶಃ ವಾಗಿ ಮರಣವಾಗಿರುವದಿಲ್ಲ. ಬಲಿಪಶುಗಳು ಇನ್ನೂ ಜೀವದಿಂದ ಇರುವರು. ಅವರು (ಪ್ರಕಟಣೆ 9:6 ರವರಂತೆ) ನರಕದ ಬೆಂಕಿಯಿಂದ ಪರಿಹಾರದಂತೆ ನಿಶ್ಚಯವಾಗಿ ಮರಣವನ್ನು ಹುಡುಕುವರು, ಆದರೆ ಮರಣವು ಅವರಿಂದ ಓಡಿಹೋಗುವುದು.


---

ಟಿಪ್ಪಣಿಗಳು

[1]ಕರ್ತನ ಎರಡು ದೃಶ್ಯ ಬರೋಣಗಳೊಂದಿಗೆ ಗಲಿಬಿಲಿ ಮಾಡಿಕೊಳ್ಳಬಾರದು - ಆತನ ಜನನದಲ್ಲಿ ಹಾಗೂ ಆತನ ಎರಡನೆಯ ಬರೋಣದಲ್ಲಿ - ಮೂರು ಅದೃಶ್ಯವಾದ "ಬರೋಣಗಳು": (1) ಸಭೆಯು ಸ್ಥಾಪಿಸಲ್ಪಟ್ಟಾಗ (ನೋಡಿರಿ ಮತ್ತಾಯ 10:23; 16:28); (2) ಯೆರೂಸಲೇಮಿನ ನಾಶನ (1 ಪೇತ್ರ 4:7; ಯಾಕೋಬ 5:7; ನೋಡಿರಿ ಮತ್ತಾಯ 26:64); ಮತ್ತು (3) ಪ್ರಿತಿಯೊಬ್ಬ ಕ್ರೈಸ್ತನಿಗೆ (ಯೋಹಾನ 14:23; ಫಿಲಿಪ್ಪಿ 4:5). ಯೇಸುವಿನ ಎರಡನೆಯ ದೃಶ್ಯವಾದ ಬರೋಣವು "ಎರಡನೆಯಬರೋಣ" ಎಂದು ಕರೆಯಲ್ಪಟ್ಟಿದೆ. His *parousia* ಎಂದು ಕರೆಯಲ್ಪಟ್ಟದ್ದಲ್ಲದೇ ಈ ಭವಿಷ್ಯದ ಘಟನೆಯು His *apokalupsis* ("ಪ್ರಕಟನೆ"; 2 ಥೆಸಲೊನೀಕ 1:7-10; 1 ಪೇತ್ರ 1:3-13); His *epiphaneia* ("ಕಾಣಿಸಿಕೊಳ್ಳುವಿಕೆ"; 1 ತಿಮೊಥೆ 6:14); ಮತ್ತು ("ಕರ್ತನ ದಿನ" 2 ಥೆಸಲೊನೀಕ 2:2) ಎಂದು ಕರೆಯಲ್ಪಟ್ಟಿದೆ. His *parousia*, His *apokalupsis* ಮತ್ತು His *epiphaneia*ಗಳು *he hemera kuriou*ಗಾಗಿ ನೇಮಿಸಲ್ಪಟ್ಟಿವೆ (1 ಕೊರಿಂಥ 1:7, 8; 2 ಥೆಸಲೊನೀಕ 2:1, 2, 8). [2]ಕರ್ತನೊಂದಿಗೆ ಇರಲು ಹೋಗುವಂಥದ್ದು ಎಂಬುದನ್ನು raptureನಂತೆ ವಿವರಿಸಬಹುದು ಆದರೆ ಅದು ಪೌಲನಿಗೆ ಏಳು ವರ್ಷಗಳ ಅವಧಿಯದಾಗಿರುವದಿಲ್ಲ, ಆದರೆ "ಯಾವಾಗಲೂ" ಕರ್ತನೊಂದಿಗೆ ಇರುವುದಾಗಿದೆ (1 ಥೆಸಲೊನೀಕ 4:17). [3]Tertullian *On the Resurrection of the Flesh* 24. Alexander Roberts and James Donaldson, eds., *The Ante-Nicene Fathers: Translations of the Writings of the Fathers down to A.D. 325*, rev. and arr. A Cleveland Coxe (Grand Rapids, Mich.: Wm. B, Eerdmans Publishing Co., 1957). [4]Tertullian *Apology* 32.

© 2009 Truth for Today

## ಯೇಸು ಕ್ರಿಸ್ತನು ದೇವರಾಗಿದ್ದೇನೆಂದು ಹೇಳಿದನು




Adapted from *Evidence That Demands A Verdict,* Josh McDowell

© 2009 Truth for Today